(SRI M. V. RAMA RAO)

trying to evict the two Harijans for this purpose. On 13-7-1967 a portion of the mud walls of the hut of Shri Ramaiah collapsed on account of seepage of water.

PRIVILEGE MOTION RAISED BY Sri S. GOPALA GOWDA

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—177ನೇ ನಿಯಮದ ಪ್ರಕಾರ ನಾನು ಅನುಮತಿ ಕೇಳುತ್ತೇನೆ. ಒಂದು ಹಕ್ಕಿನ ಪ್ರಶ್ನೆ ಏನೆಂದರೆ, ಈ ಮಾನ್ಯ ಸಭೆಯ ನಾಯಕರು ಮತ್ತು ಮುಖ್ಯ ಮಂತ್ರಿಯಾದಂತಹ ಶ್ರೀ ನಿಜಲಿಂಗಪ್ಪನವರು ದೆಹಲಿಯಲ್ಲಿ ಒಂದು ಪತ್ರಿಕಾ ಸಂದರ್ಶನದಲ್ಲಿ ಮಾತನಾಡುತ್ತಾ, ಪಕ್ಷಾಂತರಕ್ಕೆ ಪ್ರತಿಯಾಗಿ ಸುಮಾರು 12 ಮಂದಿ ವಿರೋಧಪಕ್ಷಗಳ ಸದಸ್ಯರು ಆಳಿತ ಪಕ್ಷ ಸೇರುವ ನಿರೀಕ್ಷೆ ಇದೆ ಎಂದೂ ಇದರಿಂದ 214 ಮಂದಿ ಇರುವ ವಿಧಾನ ಸಭೆಯಲ್ಲಿ ಆಡಳಿತ ಪಕ್ಷದ ಬಲವು ಸುಮಾರು 140ಕ್ಕೆ ಏರುವುದೆಂದೂ ಹೇಳಿದರು. ಇನ್ನೊಂದು ವಿಷಯ. ಆಡಳಿತ ನಡೆಸುತ್ತಿರುವ ಪಕ್ಷದಲ್ಲಿ ಭಿನ್ನಮತೀಯರು ಇರಬಹುದಾದರೂ, ನಾನಾ ಗುಂಪುಗಳಾಗಿರುವ ಅವರಲ್ಲಿ ನರಿಯಾದ ನಾಯಕತ್ವವಿಲ್ಲ. ಆದುದರಿಂದ ತಮ್ಮ ನಾಯಕತ್ವದ ವಿರುದ್ಧ ಎಲ್ಲರೊಂದಾಗಿ ಬಂಡೆದ್ದು ಸರ್ಕಾರವನ್ನು ಉರುಳಿಸಲು ವಿರೋಧ ಪಕ್ಷಗಳ ಜೊತೆ ಸೇರುವ ಸಂಭವವಿಲ್ಲವೆಂದು ಹೇಳಿದ್ದಾರೆ. ಸದ್ಯಕ್ಕೆ ನಮ್ಮ ನಂಪುಟ ಬಹಳ ಸುಭದ್ರವಾಗಿದೆ, ನನ್ನ ನಾಯಕತ್ವಕ್ಕೆ ಏನೂ ಚ್ಯುತಿಯಿಲ್ಲವೆಂದು ಹೇಳಿದ್ದಾರೆ. ಇದರಲ್ಲ ವಿರೋಧ ಪಕ್ಷದವರು ಸೇರುವುದಕ್ಕೆ ಸಿದ್ಧವಾಗಿದ್ದಾರೆ. ಒಂದು ಅನುಚಿತ ಪ್ರಚಾರವನ್ನು ಮಾನ್ಯ ಮುಖ್ಯ ಮಂತ್ರಿಯವರು ಮಾಡುತ್ತಿದ್ದಾರೆಂದು ಪ್ರಕಟವಾಗುತ್ತದೆ. ಇದರ ಜೊತೆಗೆ ಏನೇನು ಪ್ರಯತ್ನಗಳನ್ನು ಮಾಡುತ್ತಾರೆಂಬುದೂ ನರಿಯಾಗಿ ಗೊತ್ತಿಲ್ಲ. ಮಾಡುತ್ತಿರಬಹುದು. ಈ ನಂದರ್ಭದಲ್ಲಿ ಅಧ್ಯಕ್ಷರ ಮೂಲಕ ಮಾನ್ಯ ಸಭೆಯ ಗಮನಕ್ಕೆ ತರಬಯನುತ್ತೇನೆ. ಇದರಲ್ಲಿ ಒಂದು ವಿಷಯವನ್ನು ಗಮನಿಸಬೇಕು. ಈ ಮಾನ್ಯ ಸಭೆ ನಡೆಯುತ್ತಿರುವಾಗ ಸಭೆಯ ನಾಯಕರಾದ ಮುಖ್ಯ ಸಚಿವರು ಇಲ್ಲಿ ಇರಬೇಕಾದುದು ಸಾಮಾನ್ಯವಾದ ಸಂಪ್ರದಾಯ. ಆದರೆ ಅನಿವಾರ್ಯವಾದ ಕೆಲಸ ಇದ್ದಾಗ ಅವರು ಗೈರುಹಾಜರಿಯಾಗಬಹುದು. ಹಿಂದೆ ನಾವು ಸೂಚನೆ ಮಾಡಿದ್ದೆವು ಎನೆಂದರೆ, ನೀವು ಪದೇ ಪದೇ ಗೈರುಹಾಜರಿಯಾಗಿರುವುದರಿಂದ ಒಬ್ಬ ಉಪನಾಯಕನನ್ನು ನೇಮಕ ಮಾಡಿ ಗೈರುಹಾಜರಿಯನ್ನು ನರಿಪಡಿಸುವುದಕ್ಕೆ ಪ್ರಯತ್ನಮಾಡಿ ಎಂದು. ಅದನ್ನು ಮಾಡಲಿಲ್ಲ. ಇಷ್ಟೆಲ್ಲಾ ಆದರೂ ಇವರು ದೆಹಲಿಗೆ ಹೋಗಿರುವರಲ್ಲದೆ, ಇದು ಆಳುವ ಪಕ್ಷದ ಅನೇಕ ಸದಸ್ಯರ ಮೇಲೆ, ಮತ್ತು ವಿರೋಧಪಕ್ಷದ ಅನೇಕ ಸದಸ್ಯರ ಮೇಲೆ ಒಂದು ನಡತೆಯ ವಿಷಯದಲ್ಲಿ ಅನುಮಾನ ಹುಟ್ಟಿಸಬಹುದಾದ ಮತ್ತು ಅವಹೇಳನ ಮಾಡುವ ಮಾತನ್ನು ಮಾನ್ಯ ಸಚಿವರು ಬಹಿರಂಗವಾಗಿ ಪ್ರಕಟಿಸಿದ್ದಾರೆ. ಈ ಒಂದು ವಿಷಯವನ್ನು ಗಂಭೀರವಾಗಿ ಸಭೆ ವಿಚಾರ ಮಾಡುವುದಕ್ಕೆ ತಾವು ಅವಕಾಶ ಕಲ್ಪಿಸಿಕೊಡಬೇಕೆಂದು ನಾನು ಹೇಳುತ್ತೇನೆ. ಇದರ ಗಾಂಭೀರ್ಯ ನನಗೆ ಗೊತ್ತಿದ್ದ ಹಾಗೆ ಈ ಅನುಪೂರಕ ಅನುದಾನಗಳು ಓಟಿಗೆ ಬರುವಾಗ, ಕಾಂಗ್ರೆಸ್ ಪಕ್ಷದಿಂದ ಸುಮಾರು 34 ಜನ ಓಟು ಮಾಡಬಾರದು ಎಂದು ತೀರ್ಮಾನಮಾಡಿದ್ದಾರೆಂದು ನಾನು ಕೇಳಿದೆ. ಅದರಲ್ಲಿ ಸಮರ್ಥ ನಾಯಕರೂ ಇದ್ದಾರೆ.

ಅಧ್ಯಕ್ಷರು.—ಅದು ತಾವು ಹೇಳುವುದು ಸರಿಯಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಈಗ ಅವರಲ್ಲಿ ಸಮರ್ಥ ನಾಯಕತ್ವವಿಲ್ಲ. ಅವರು ಮಧ್ಯ ಪ್ರದೇಶದಲ್ಲಿ ಆದಂತೆ ಇಲ್ಲಿ ವಿರೋಧ ಪಕ್ಷದವರು ಮಾಡಲಿಕ್ಕೆ ಸಾಧ್ಯವಿಲ್ಲ, ಮೈತ್ರಿಸರ್ಕಾರ ರಾಜ್ಯದ ಸರ್ಕಾರ ಉರುಳಿಸಲು ಸಾಧ್ಯವಿಲ್ಲವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರಲ್ಲಿ ಸತ್ಯಾಂಶವಿಲ್ಲವೆಂದು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಇದರಲ್ಲಿ ಹಕ್ಕು ಪ್ರಶ್ನೆ ಇದೆಯೇ ಇಲ್ಲವೇ ಎಂದು ನಿರ್ಧಾರ ಮಾಡಬೇಕು. ಇದು ಚರ್ಚೆಯಾಗಿ ತೀರ್ಮಾನ ಮಾಡುವುದಕ್ಕೆ ಯೋಗ್ಯವಾದ ವಿಚಾರವೆಂದು ನಾನು ಭಾವಿಸುತ್ತೇನೆ.

Mr. SPEAKER.—I will give my ruling later.